# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

### ಸ್ಪೇಷಲ್ ಕೇಸ್ ನಂ. 142/2022

**ದೋ.ಸಾ. : 01 ಫ್ರಾ.ಸಾ. : 01**

| | | |
|---|---|---|
| ಸಾಕ್ಷಿಯ ಹೆಸರು | : | ಶೋಭಾ ತಿಪ್ಪಣ್ಣ ಭೋವಿವಡ್ಡರ |
| ಗಂಡನ ಹೆಸರು | : | ತಿಪ್ಪಣ್ಣ ಭೋವಿವಡ್ಡರ |
| ವಯಸ್ಸು | : | 30 ವರ್ಷ |
| ಕೆಲಸ | : | ಕೂಲಿ ಕೆಲಸ |
| ವಾಸ | : | ರವೀಂದ್ರ ನಗರ, ಯಲ್ಲಾಪುರ |

**ದಿನಾಂಕಃ 28-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1. ಮೃತೆ ಸುಶೀಲಾ ನನ್ನ ತಾಯಿ. ನನ್ನ ತಂದೆ-ತಾಯಿಗೆ 2 ಜನ ಮಕ್ಕಳು. ನಮ್ಮ ತಂದೆ ತೀರಿಕೊಂಡಿರುತ್ತಾರೆ. ಚಾಸಾ-6 ನನ್ನ ತಮ್ಮ. ನನ್ನ ಮದುವೆಯಾಗಿ 13 ವರ್ಷಗಳಾಗಿವೆ, ನನ್ನ ಮದುವೆಗೂ ಮೊದಲು ದಾಂಡೇಲಿಯ ಗಾಂಧಿನಗರದ ಬಾಡಿಗೆ ಮನೆಯಲ್ಲಿ ನಾನು, ನನ್ನ ತಮ್ಮ ಹಾಗೂ ನನ್ನ ತಾಯಿ ವಾಸವಾಗಿದ್ದೆವು. ಮದುವೆಯ ನಂತರ ನಾನು ಯಲ್ಲಾಪುರದಲ್ಲಿ ಗಂಡನೊಂದಿಗೆ ವಾಸವಾಗಿರುತ್ತೇನೆ. ಚಾಸಾ-6 ನನ್ನ ತಮ್ಮ ಮದುವೆಯಾದ ನಂತರ ದಾಂಡೇಲಿಯ ಗಾಂವಠಾಣಾದಲ್ಲಿ ವಾಸವಾಗಿರುತ್ತಾನೆ. ನನ್ನ ತಾಯಿ, ನನ್ನ ಅಜ್ಜ-ಅಜ್ಜಿಯೊಂದಿಗೆ ವಾಸವಾಗಿದ್ದರು. ನಾವು ಪರಿಶಿಷ್ಟ ಜಾತಿಯ ಭೋವಿ ವಡ್ಡರ ಜನಾಂಗಕ್ಕೆ ಸೇರಿದವರಾಗಿರುತ್ತೇವೆ. 2 ನೇ ಆರೋಪಿ ನನಗೆ ಗೊತ್ತು, ಆತನೂ ಸಹ ಪರಿಶಿಷ್ಟ ಜಾತಿಯವನು. ನಾವು ದಾಂಡೇಲಿಯ ಗಾಂಧಿನಗರದ ಬಾಡಿಗೆ ಮನೆಯಲ್ಲಿ ವಾಸವಾವಿದ್ದ ಮನೆಯ ನಂತರದಿಂದ ಆತನ ಮನೆಯು 3 ನೇ ಮನೆಯಾಗಿರುತ್ತದೆ ಹಾಗೂ ಆತನ ಪರಿಚಯವಿತ್ತು, ಆತ ನನ್ನ ತಾಯಿಯೊಂದಿಗೆ ಮಾತನಾಡುತ್ತಿದ್ದನು.

2. ನನ್ನ ತಾಯಿ ಮನೆಗೆಲಸ ಮಾಡುತ್ತಿದ್ದಳು. ಆಕೆಗೆ ಅರಾಮಿಲ್ಲದ ಕಾರಣ ಮನೆಗೆಲಸವನ್ನು ಬಿಟ್ಟಟಿದ್ದಳು. ಆದಾದ ಸ್ವಲ್ಪ ದಿನಗಳ ನಂತರ ಜೊಯಿಡಾದ ಪೋಟೋಳಿಯಲ್ಲಿನ ನೇಚರ್ ನೆಸ್ಟ್ ಹೋಂ ಸ್ಟೇನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು ಹಾಗೂ ಅಲ್ಲಿ ಪಾತ್ರೆ ತೊಳೆಯುವುದು, ರೂಮ್

ಗಳನ್ನು ಕ್ಲೀನ್ ಮಾಡುವುದು, ಕಸ ತೆಗೆಯುವುದು ಮಾಡುತ್ತಿದ್ದರು ಹಾಗೂ ಅವರು ಅಲ್ಲಿಯೇ ಒಂದು ರೂಮ್ ನಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಟ್ಟಿದ್ದರು. ನನ್ನ ತಾಯಿ ಕೆಲಸ ಮಾಡುತ್ತಿದ್ದ ಜಾಗಕ್ಕೆ ಒಮ್ಮೆ ಹೋಗಿ ನೋಡಿಕೊಂಡು ಬಂದಿರುತ್ತೇನೆ. ನನ್ನ ತಾಯಿ ಕೆಲಸ ಮಾಡುತ್ತಿದ್ದ ಹೋಮ್ ಸ್ಟೇನಲ್ಲಿ 1 ಮತ್ತು 2 ನೇ ಆರೋಪಿತರು ಸಹ ಕೆಲಸ ಮಾಡುತ್ತಿದ್ದರು. 1 ನೇ ಆರೋಪಿ ರೆಡ್ಡಿ ಜನಾಂಗಕ್ಕೆ ಸೇರಿದವರು ಹಾಗೂ ಆತನಿಗೆ ನಾವು ಪರಿಶಿಷ್ಟ ಜಾತಿಯ ಭೋವಿ ವಡ್ಡರ ಜನಾಂಗಕ್ಕೆ ಸೇರಿದವರು ಎಂದು ತಿಳಿದಿತ್ತು.

3. ದಿಃ 25-08-2022 ರಂದು ಬೆಳಿಗ್ಗೆ 07-30 ಗಂಟೆಗೆ ನಾನು ನನ್ನ ತಾಯಿಗೆ ಕರೆ ಮಾಡಿ ಮಾತನಾಡಿರುತ್ತೇನೆ ಹಾಗೂ ಅವರು ಸಹ ನನ್ನ ಮಕ್ಕಳೊಂದಿಗೆ ಮಾತನಾಡಿರುತ್ತಾರೆ. ಪುನಃ ಸಂಜೆ 07-30 ರಿಂದ 08-00 ಗಂಟೆ ಸಮಯದಲ್ಲಿ ನಾನು ನನ್ನ ತಾಯಿಗೆ ಕರೆ ಮಾಡಿದೆ, ಆಗ ಅವರ ಮೊಬೈಲ್ ನಾಟ್ ರೀಚೆಬಲ್ ಎಂದು ಬಂದಿರುತ್ತದೆ. ಮರು ದಿನ ಬೆಳಿಗ್ಗೆ 09-00 ರಿಂದ 10-00 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದಾಗ, 2 ನೇ ಆರೋಪಿತನು ನನಗೆ ಕರೆ ಮಾಡಿ, “ನಿನ್ನ ತಾಯಿ ಮಲಗಿದ್ದಲ್ಲೇ ತೀರಿಕೊಂಡಿರುತ್ತಾರೆ, ಅವರನ್ನು ನಾವು ದಾಂಡೇಲಿಯ ನಿಮ್ಮ ಅಜ್ಜಿಯ ಮನೆಗೆ ಕರೆದುಕೊಂಡು ಹೋಗುತ್ತಿದ್ದೇವೆ, ನೀವು ಅಲ್ಲಿಗೆ ಬನ್ನಿ" ಎಂದು ಹೇಳಿರುತ್ತಾನೆ. ಆ ನಂತರ ನನ್ನ ದೊಡ್ಡಮ್ಮನ ಮಗನಾದ ಚಾಸಾ-7 ರವರು ನನಗೆ ಕರೆ ಮಾಡಿ, ದಾಂಡೇಲಿಯ ಸರಕಾರಿ ಆಸ್ಪತ್ರೆ ಬಳಿ ಬರುವಂತೆ ಹೇಳಿರುತ್ತಾನೆ. ಆ ನಂತರ ನಾನು ಯಲ್ಲಾಪುರದಿಂದ ದಾಂಡೇಲಿಯ ಸರಕಾರಿ ಆಸ್ಪತ್ರೆಗೆ ಹೋದೆನು. ಅಲ್ಲಿ ಚಾಸಾ-7 ರವರು ನನ್ನನ್ನು ಶವಗಾರಕ್ಕೆ ಕರೆದುಕೊಂಡು ಹೋಗಿ, ನನ್ನ ತಾಯಿ ಶವವನ್ನು ತೋರಿಸಿದರು. ನಾನು ನನ್ನ ತಾಯಿಯ ಶವವನ್ನು ನೋಡಿದಾಗ, ಕುತ್ತಿಗೆಯ ಬಳಿ ಬಿಗಿದ ಗುರುತು ಇತ್ತು ಹಾಗೂ ಕುತ್ತಿಗೆಯ ಭಾಗ ಕಪ್ಪಾಗಿತ್ತು, 2 ಕಾಲಿನ ಹಿಮ್ಮಡಿಯ ಭಾಗದಲ್ಲಿ ಗಾಯವಾಗಿ ರಕ್ತ ಬಂದಿತ್ತು.

**ನ್ಯಾಯಾಲಯದ ಸಮಯಾವಕಾಶದ ಅಭಾವದಿಂದಾಗಿ ಮುಂದುವರೆದು ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ